ಮೈಸೂರ ಗೆಜಿಟ್.

ನಂ. 33 ಸರ್ಕಾರದಿಂದ ಪ್ರಕಟಿಸಿ ಆದ್ದು. ಸನ್ 1889.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 17, ಸನ್ 1889.

ಈ ಭಾಗವನ್ನು ಪ್ರತ್ಯೇಕ ನೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾನಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಫೋಸ್ಟಾಫಿಸ್ ನೋಟಿಸುಗಳು.

3ನೇ ಭಾಗ–ಶ್ರೀಮ ಮಹಾರಾಜ ರಾಜಾನಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟ್ಸಗಳು ವ ರೆಗ್ಯುಲೇಷಣಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾನಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 20ನೇ ಜುಲೈ 1889.

ನಂ. 100.—ತುಮಕೂರು ತಾಲ್ಲೂಕಿನಲ್ಲಿರುವ ಗುಡ್ಡನಪಾಳ್ಯ ಯಂಬ ಹೆಸರುಳ್ಳ ಅಸಲೀ ಗ್ರಾಮಕ್ಕೆ ಗೌರೀಪುರವೆಂಬ ಹೆಸರು ಕೊಡೋಣಾಗಿರುತ್ತದೆ.

ತಾರೀಖು 24ನೇ ಜುಲೈ 1889.

ನಂ. 102.—1888ನೇ ಇಸವಿಯ 4ನೇ ರೆಗ್ಯುಲೇಷನ್ ಯಂಬ ಮೈಸೂರು ಲ್ಯಾಂಡ್ ರವಿನ್ಯೂ ಕೋಡಿನಲ್ಲಿ 236ನೇ ಸೆಕ್ಷನಿನ 2ನೇ ಕಲಮನುಸರಿಸಿ, ನಂಜನಗೂಡು ತಾಲ್ಲೂಕು ವೈಕಿ ಪರಭಾರೆಯಾಗಿರುವ ಅಲಗಂಜೀ ಗ್ರಾಮಕ್ಕೆ ಸದರೀ ಕೋಡಿನ 8 ವ 9ನೇ ಚಾಪ್ಟರುಗಳ (ಪ್ರಕರಣ) ನಿಯಮುಗಳನ್ನು ಜಾರೀಲಿ ತರತಕ್ಕದ್ದೆಂದು ಶ್ರೀಮ ಮಹಾರಾಜಾ ಸರ್ಕಾರದವರು ಆಜ್ಞಾಪಿಸಿ ಮಾಡಿರುತ್ತಾರೆ.

ತಾರೀಖು 31ನೇ ಜುಲೈ 1889.

ನಂ. 107.—ಸಕಲ ಜನಗಳಿಗೂ ತಿಳಿಯುವಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ನವಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರಿ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಿಚ್ಛಾನುಸಾರ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ವೈಕಿ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ವೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲನ್ನು ಪಾವತಿ ಮಾಡಿದ್ದರೆ ಜಮೀನುಗಳು ಅವ್ವಲ್‌ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯನ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮನ್ಸೂಕಾಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮಾಗ್ಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಧರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಆಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಆಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಜಿಲ್ಲೆಯು.	ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುರಕಾರಕ್ಕೆ ಕೊಟ್ಟುವಳೀ ಯಾಡಬೇಕಾದ ಕ್ವಿಟೆರೆಂಟ್.	ಸಾಲಿಯಾನಾ ಸರಕಾರದ ಕಂದಾಯದ ಬಾಕೀ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೇ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಬೆಂಗಳೂರು.	ಬೆಂಗಳೂರು ಯಲಹಂಕ	ಹೊಸಕೋಟೆ ನಂದಗುಡಿ	ಯಿಟ್ಟಸಂದ್ರ	ವೆಂಕಟದಾಸಪ್ಪ	47 16 4	362 14 7	293 4 0	183 11 6 ಮತ್ತು ಬಡ್ಡಿ	ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರ ರೂಬರೂ 1889ನೇ ಇಸವಿ ಸೆಪ್ಟಂಬರ್ ತಾರೀಖು 10ರಲ್ಲು.
			ಮಾದರಹಳ್ಳಿ	ವಿ. ಅಬ್ದುಲ್‌ಖಾದ 6	92 12 8¼	159 14 10	123 4 7	76 2 3 ಮತ್ತು ಬಡ್ಡಿ	ಡಿಟೋ ಡಿಟೋ ತಾರೀಖು 12ರಲ್ಲು.

ಷರಾ.—ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ, ಉಂಟುಮಾಡಲ್ಪಟ್ಟ ತಮ್ಮುಂ ಹಿಡುವಳಿಗೂ, ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವದಿಲ್ಲವೆ.

ತಾರೀಖು 2ನೇ ಆಗಸ್ಟು 1889.

ನಂ. 108.—ಆನೇಕಲ್ ತಾಲ್ಲೂಕು ಅಮಲ್ದಾರ್ ಸೈದ್ ಅಮೀರ್‌ಹಸ್ಸನ್‌ಯವರು, ಅವರಿಗೆ 1889ನೇ ಇಸವಿ ಜುಲೈ 12ನೇ ಮತ್ತು ಂ 469ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಪ್ರಿವಲೀಜ್ ರಜಾದಿಂದ ಅದೇ ಮಾಹೆ 13ನೇ ಮತ್ತು ಮಿನ ಪೂರ್ವಾನ್ಹದಲ್ಲಿ ಮರಳಿ ಉದ್ಯೋಗದ ಮೇಲೆ ಹಾಜರಾಗಿರುತ್ತಾರಾಗಿ ಉಳಿದ ಭಾಗ ಅಂದರೆ 9 ದಿವಸಗಳ ರಜಾ ಯಿದರ ದೆಯಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 3ನೇ ಆಗಸ್ಟು 1889.

ನಂ. 109.—ಶಿವಮೊಗ್ಗಾವಿನ ಸಿವಿಲ್ ಸರ್ಜಿಯರ್‌ರಾದ ಮೆ|| ಡಿ. ಎ. ಚೋಕ್ಸಿಯವರಿಗೆ, 1889ನೇ ಇಸವಿ ಜೂನ್ 1ನೇ ಮತ್ತು ಂ 66ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ 30 ದಿವಸಗಳ ರಜಾಕ್ಕೆ ಜಾಸ್ತಿಯಾಗಿ ಯಿನ್ನೂ ಐದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 110.—ಕೋಲಾರದ ಡಿಸ್ಟ್ರಿಕ್ಟು ಶಿಷ್ಟಫಟ್ಟು ತಾಲ್ಲೂಕು ಅಮಲ್ದಾರ್ ಗುಂಡಪ್ಪನವರಿಗೆ, 1889ನೇ ಇಸವಿ ಮೇ 17ನೇ ಮತ್ತು ಂ 45ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ 24 ದಿವಸಗಳ ಪ್ರಿವಲೀಜ್ ರಜಾಕ್ಕೆ ಜಾಸ್ತಿಯಾಗಿ ಯಿನ್ನೂ 3 ದಿವಸಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 111.—ಕೋಲಾರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಸರ್ಜಿಯರ್‌ರಾದ ಜಿ. ಜಿ. ನೊರೋನ್ಹಾಯವರಿಗೆ, 1889ನೇ ಇಸವಿ ಜೂನ್ 10ನೇ ಮತ್ತು ಂ 65ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಪ್ರಿವಿಲೀಜ್ ರಜಾವು ಯಿದರ ದೆಯಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 6ನೇ ಆಗಸ್ಟು 1889.

ನಂ. 112.—ಮದರಾಸ್ ಪಿಬ್ಬಂದಿಯ ಪೆರ್ಪೆಡ್ ಅಸಿಸ್ಟೆಂಟ್ ಅಸಿಸ್ಟೆಂಟ್ ಯಫ್. ಚಿಂಣಯ್ಯನವರಿಗೆ, 1889ನೇ ಇಸವಿ ಆಗಸ್ಟ್ 1ನೇ ಮತ್ತು ಂ ಲಾಗಾಯತು 6 ತಿಂಗಳ ಪರಿಯಂತ ಅಜಮಾಯಿಷಿ ತರೀಕ್ ಯರನೇ ಕ್ಯಾಸ್ ಅಸಿಸ್ಟೆಂಟರಾಗಿ ಮೊಕರರ್ರ್ಮಾಡಲ್ಪಟ್ಟಿರುತ್ತೆ.

ತಾರೀಖು 7ನೇ ಆಗಸ್ಟು 1889.

ನಂ. 113.—ಇದರಿಂದ ಪ್ರಕಟಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟಿನ ಇದರಡಿ ಕಂಡ ಡಿವೋಗಳಲ್ಲಿ ತೇಗ ಮತ್ತು ಯಿತರ ಜಾತಿ ಮರಗಳು ವ ಬೊಂಬುಗಳು ಮತ್ತೊಂದು ಹುಕುಂ ಕೊಡುವ ಪರಿಯಂತ ಇದರಡಿಕಂಡ ತಖ್ತೆಯಲ್ಲಿ ನಮೂದಿರುವ ದರಗಳ ಪ್ರಕಾರ ವಿಕ್ರಯಿಸಲ್ಪಡತಕ್ಕದ್ದು.

ತರಹೆಗಳು.	ಲಕ್ಕುವಳ್ಳಿ ಡಿಪೊ.	ತರೀಕೆರೆ ಡಿಪೊ.	ಚಿಕ್ಕಮಗಳೂರು ಡಿಪೊ.
	ಘನಅಡಿ 1ಕ್ಕೆ	ಘನಅಡಿ 1ಕ್ಕೆ	ಘನಅಡಿ 1ಕ್ಕೆ
ತೇಗ, ಅವ್ವಲ್ ತರಹೆ	1 8 0	1 10 0	1 12 0
,, ದುಯ್ಯಂ ,, ...	1 4 0	1 6 0	1 8 0
,, ತಿಯ್ಯಂ ,, ...	1 0 0	1 2 0	1 4 0
ಮನ್ನಾಜಾತಿ, ಅವ್ವಲ್ ತರಹೆ	0 13 0	0 15 0	1 0 0
,, ದುಯ್ಯಂ ,, ...	0 11 0	0 13 0	0 14 0
ಮನ್ನಾಜಾತಿ ಅಲ್ಲದ್ದು ಅವ್ವಲ್ ತರಹೆ	0 8 0	0 10 0	0 12 0
,, ದುಯ್ಯ ,, ...	0 7 0	0 9 0	0 11 0
ತೇಗದ ಕೂಚಗಳು	0 12 0	0 14 0	0 15 0
ಕಾಡುಜಾತಿ ಕೂಚಗಳು .. :	0 6 0	0 8 0	0 8 0
	ದರ ನೂರಕ್ಕೆ	ದರ ನೂರಕ್ಕೆ	ದರ ನೂರಕ್ಕೆ
ಸಂಣ ಬಿದರು	5 0 0	5 8 0	6 0 0
ದೊಡ್ಡ ಬಿದರು	12 0 0	13 0 0	12 0 0

ನಂ. 114.—ಪೊಲೀಸ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಎ. ಕೃಷ್ಣಸ್ವಾಮಯ್ಯಂಗಾರ್ರು, 1889ನೇ ಇಸವಿ ಆಗಸ್ಟ್ 5ನೇ ಮಕ್ತುಂ ಲಾಗಾಯತ್ತು ಬಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 115.—ಎ. ಹೆಚ್. ಅರ್ಜಾಯವರು, 1889ನೇ ಇಸವಿ ಆಗಸ್ಟ್ 1ನೇ ಮಕ್ತುಂ ಲಾಗಾಯತು ಆರುತಿಂಗಳ ಪರಿಯಂತ ಅಜಮಾಯಿಷಿ ತರೀಕ್ ವಂದನೇ ಕ್ಯಾನ್ ಆಸಿಪಟಿಲ್ ಅಸಿಸ್ಟೆಂಟರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,

ಆರ್. ವಿಜಯೀಂದ್ರರಾವ್,
ಜೀಫ್ ಸೆಕ್ರಿಟರಿ.

ವಿದ್ಯಾಭ್ಯಾಸದ ಇಲಾಖೆ.

ಸ್ಯ 1889ನೇ ಇಸವಿ ಜುಲೈ ತಾರೀಖು 25.

ಸ್ಯ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವಂಥಾವರಿಗೆಇದ ರಡಿ ಕಂಡಂತೆ ಬಹುಮಾನಗಳು ಕೊಡಲ್ಪಡುವವು:—

1 ಗೋರೀಬಿದನೂರು ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲ್ ಹೆಡ್ ಮಾಸ್ಟರಾದ ಮೆ॥ ರಾ॥ ಬಿ. ಕೃಷ್ಣಕಿಂಗು ಯವರಿಂದ	ಚಿಂತಾಮಣಿ, ಕಿಲ್ಲಘಟ್ಟ, ಮತ್ತು ದೊಡ್ಡಬಳ್ಳಾಪುರ ಈ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲ್‌ಗಳಿಂದ ತೇರ್ಗಡೆ ಹೊಂದುವ ವಿದ್ಯಾರ್ಥಿಗಳ ಪೈಕಿ ಕನ್ನಡ ಭಾಷಾ ಗ್ರಂಥಗಳಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಸಟೀಕಾ ಕನ್ನಡ ಗುರುಬಾಲಪ್ರಬೋಧಿಕೆ.
2 ಗೋರೀಬಿದನೂರು ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲ್ ಅ॥ ಮಾ॥ ಮೆ॥ ರಾ॥ ಯಂ. ವೆಂಕಟಪ್ಪನವರಿಂದ	ಚಿಂತಾಮಣಿ, ಕಿಲ್ಲಘಟ್ಟ ಮತ್ತು ದೊಡ್ಡಬಳಾಪುರ ಈ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲ್‌ಗಳಿಂದ ತೇರ್ಗಡೆ ಹೊಂದುವ ವಿದ್ಯಾರ್ಥಿಗಳ ಪೈಕಿ ಗಣಿತದಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಮೊಂಗಳೂರು ಭಾಪಾ ಕಬ್ಬಮಣಿವರ್ಣಣ
3 ಗೋರೀಬಿದನೂರು ತಾಲ್ಲೂಕು ಕೇಂದ್ರ ಪಿಕಮಿಾ ಇಜಾರದಾರ್ ಮೆ॥ ರಾ॥ ಸಂಜೀವರಾಯಪ್ಪನವರಿಂದ	ಆರೋಗ್ಯ ಮತ್ತು ವ್ಯವಸಾಯ ಶಾಸ್ತ್ರಗಳಲ್ಲಿ ಮೈಸೂರು ಕೀಮೆಯಲ್ಲಿ ಅಧಿಕವಾದ ನಂಬರುಗಳನ್ನ ಪಡೆದು ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ ಮೂವ್ವತ್ತುನಾಲ್ಕು ಸಂಧಿಗಳುಳ್ಳ ಸಟೀಕಾ ಜೈಮಿನಿ ಭಾರತ.
4 ಹೊಸದುರ್ಗ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲ್ ಹೆಡ್‌ಮಾಸ್ಟರ್ ಮೆ॥ ರಾ॥ ಡಿ. ಪದ್ಮನಾಭಶಾಸ್ತ್ರಿಗಳಿಂದ	ಕಿಲ್ಲಘಟ್ಟ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆ ಹೊಂದುವವರ ಪೈಕಿ ಕನ್ನಡ ಭಾಷಾ ಗ್ರಂಥಗಳಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಗ್ರಂಥ ರತ್ನಾಕರ ಮುದ್ರಾಕ್ಷರ ಶಾಲೆಯಲ್ಲಿ ಛಾಪಿಸಲ್ಪಟ್ಟ ಚತುರ್ದಶಾಶ್ವಾಸಉಳ್ಳ ರಾಜಶೇಖರ.
5 ಡಿಟೋ ಯವರಿಂದ	ಹೊಸದುರ್ಗ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆ ಹೊಂದುವವರ ಪೈಕಿ ಗಣಿತದಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಮಳವಳ್ಳಿ ಗವರ್ಮೆಂಟ್ ಕನ್ನಡ ಸ್ಕೂಲ್ ಹೆಡ್ ಮಾಸ್ಟರಿಂದ ರಚಿಸಲ್ಪಟ್ಟ ಕನ್ನಡ ಬೀಜಗಣಿತ.
6 ಆರಕಲ್‌ಗೂಡು ತಾಲ್ಲೂಕು ರೆಕಾರ್ಡು ಕೀಪರ್ ಮೆ॥ ರಾ॥ ವೆಂಕಟಾಚಾರ್ರು, ನಗದೀ ಗುಮಾಸ್ತ ಜಿ. ಕಾರ್ಗಡೆ ಹೊಂದುವವರ ಪೈಕಿ ಅಧಿಕವಾದ ನಂಬರುಗಳನ್ನ ಪಡೆಯುವಂಥಾವರಿಗೆ ಸಂಸ್ಕೃತ ಕ್ರೀಮದ್ರಾವಾಯಣ. ಮಂಣ ಮತ್ತು ಜುಡಿಷಿಯಲ್ ಗುಮಾಸ್ತ ಸೂರ್ಯನಾರಾಯಣ ರಣಪ್ಪ ಇವರುಗಳಿಂದ ..
7 ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟ್ ಪ್ರೊಬೇಷನರಾದ ಮೆ॥ ರಾ॥ ಕೆ. ರಾಮಯ್ಯಂಗಾರ್ರವರಿಂದ ..	ಆರೋಗ್ಯ ಮತ್ತು ವ್ಯವಸಾಯ ಶಾಸ್ತ್ರಗಳಲ್ಲಿ ಮೈಸೂರು ಕೀಮೆಯಲ್ಲಿ ಅಧಿಕವಾದ ನಂಬರುಗಳನ್ನ ಪಡೆದು ತೇರ್ಗಡೆ ಹೊಂದುವಂಥಾವರಿಗೆ ಒಂದು ವಾಟರ್‌ಬೆರಿ ಗಡಿಯಾರ.

1889ನೇ ಇಸವಿ ಆಗಸ್ಟ್ ತಾರೀಖು 7.

ಮೈಸೂರು ದೇಶೀಯ ಪರೀಕ್ಷೆ.

ಸ್ಯ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಹೊಸದುರ್ಗ ತಾಲ್ಲೂಕು ಗವರ್ಮೆಂಟು ಕನ್ನಡ ಸ್ಕೂಲಿನಿಂದ ತೇರ್ಗಡೆ ಹೊಂದುವವರ ಪೈಕಿ ಆರೋಗ್ಯ ಶಾಸ್ತ್ರದಲ್ಲಿ ಅಧಿಕವಾದ ನಂಬರುಗಳನ್ನ ಹೊಂದುವಂಥಾ ವಿದ್ಯಾರ್ಥಿಗೆ ಹಾಸ್ಪಟಿಲ್ ಅಸಿಸ್ಟೆಂಟರಾದ ಮೆ॥ ಚೆನ್ನಸಾಮಿ ಯವರಿಂದ ಮೂವ್ವತ್ತನಾಲ್ಕು ಸಂಧಿಯುಳ್ಳ ಸಟೀಕಾ ಕನ್ನಡ ಜೈಮಿನಿ ಭಾರತ ವೆಂಬ ಪುಸ್ತಕವು ಬಹುಮಾನವಾಗಿ ಕೊಡಲ್ಪಡುವದು.

ಎಲ್. ರೈಸ್,
ಎಡ್ಯುಕೇಷನ್ ಸೆಕ್ರಿಟರಿ.